# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 5405/10/31/2016 C/w 5799/10/31/2016 (SB –3)**

**ದಿನಾಂಕ: 25–06–2021.**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

1) ಶ್ರೀಮತಿ ಲೀಲಾ
   ಕೋಂ ಬುಂಡ ರಾಮ್

2) ಶ್ರೀ ಬುಂಡ ರಾಮ್
   ಬಿನ್ ಕನ್ನರಾಮ್

ಇವರಿಬ್ಬರ ವಾಸ:

**ಪಂಚರತನ್ ಜ್ಯುವೆಲರ್ಸ್,**
**ಹನುಮಾತ್ರಿ ಕಾಂಪ್ಲೆಕ್ಸ್,**
**ದೇವಸಂದ್ರ ಮುಖ್ಯರಸ್ತೆ,**
**ಕೆ.ಆರ್. ಪುರಂ,**
**ಬೆಂಗಳೂರು–560036.**

## ಆದೇಶ

ದೂರುದಾರರಾದ ಶ್ರೀಮತಿ ಲೀಲಾ ರವರ ದೂರಿನಲ್ಲಿ, ದಿನಾಂಕ.26.08.2016 ರಂದು ಅವರ ಮನೆಯಲ್ಲಿ ಚಿನ್ನಾಭರಣ ಹಾಗೂ ಹಣ ಕಳ್ಳತನವಾದ ಬಗ್ಗೆ ಕೆ.ಆರ್ ಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ದಿನಾಂಕ. 30.08.2016ರಂದು ಕೆ.ಆರ್ ಪುರಂ ಪೊಲೀಸ್ ಠಾಣೆಯ ನಿರೀಕ್ಷಕರು ದೂರುದಾರರ ಗಂಡನಿಗೆ ದೂರವಾಣಿ ಕರೆ ಮಾಡಿ, ದೂರುದಾರರನ್ನು ಹಾಗೂ ಅವರ ಗಂಡನನ್ನು ಠಾಣೆಗೆ ಬರುವಂತೆ ತಿಳಿಸಿದ್ದು, ಅದರಂತೆ ಅವರುಗಳು ಠಾಣೆಗೆ ಹೋದಾಗ, ದೂರುದಾರರನ್ನು ಠಾಣೆಯಲ್ಲಿ ಒಂದು ಗಂಟೆಯ ಕಾಲ ವಿಚಾರಣೆ ಮಾಡಿ, ವಿಚಾರಣೆಯ ನಂತರ ದೂರುದಾರರನ್ನು ಪೊಲೀಸ್ ಆಯುಕ್ತರವರೊಂದಿಗೆ ಭೇಟಿ ಮಾಡಿಸಬೇಕೆಂದು ಹೇಳಿ ದೂರುದಾರರ ಗಂಡನನ್ನು ಠಾಣೆಯಲ್ಲೇ ಬಿಟ್ಟು, ದೂರುದಾರರನ್ನು ಜೀಪಿನಲ್ಲಿ ಬೇರೆ ಠಾಣೆಗೆ ಕರೆದುಕೊಂಡು ಹೋಗಿ,

ದೂರುದಾರರೇ ದರೋಡೆ ಮಾಡಿಸಿರುವುದಾಗಿ ಒಪ್ಪಿಕೊಳ್ಳುವಂತೆ ಅವರ ಮೇಲೆ ದೈಹಿಕ ಹಲ್ಲೆ ನಡೆಸಿದ್ದು, ಇದರ ಪರಿಣಾಮ ದೂರುದಾರರಿಗೆ ಮಾತನಾಡಲು ಸಾಧ್ಯವಾಗದೇ ಇದ್ದದ್ದರಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಂದು ಗಂಟೆ ಕಾಲ ಅಲ್ಲೇ ಆರೈಕೆ ಮಾಡಿ, ನಂತರ ಬೇರೊಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ, ಮಾರನೇ ದಿನ ಅವರಿಗೆ ಈ ವಿಷಯದ ಬಗ್ಗೆ ಯಾರಿಗಾದರೂ ತಿಳಿಸಿದ್ದಲ್ಲಿ ಇದೇ ಗತಿ ಕಾಣಿಸುತ್ತೇವೆಂದು ಎಚ್ಚರಿಕೆ ನೀಡಿ ದೂರುದಾರರನ್ನು ಬಿಡುಗಡೆ ಮಾಡಿರುತ್ತಾರೆಂದು ಆಪಾದನೆ ಮಾಡಿದ್ದಾರೆ.

ಈ ದೂರಿನ ಪ್ರತಿಯನ್ನು ಉಪ ಪೊಲೀಸ್ ಆಯುಕ್ತರು, ಪೂರ್ವ ವಿಭಾಗ, ಬೆಂಗಳೂರು ಇವರಿಗೆ ಪ್ರಕರಣದ ಬಗ್ಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ತದನಂತರ ದಿನಾಂಕ.04.10.2016ರಂದು ದೂರುದಾರರ ಪತಿಯಾದ ಶ್ರೀ ಬುಂಡ ರಾಮ್ ರವರು ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಆಯೋಗಕ್ಕೆ ದೂರನ್ನು ಸಲ್ಲಿಸಿದ್ದು, ಆ ದೂರಿನಲ್ಲಿ ಅವರ ಮನೆಯಲ್ಲಿ ಚಿನ್ನಾಭರಣ ಹಾಗೂ ಹಣ ಕಳ್ಳತನವಾದ ಬಗ್ಗೆ ಕೆ.ಆರ್ ಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ದಿನಾಂಕ. 30.08.2016ರಂದು ಕೆ.ಆರ್ ಪುರಂ ಪೊಲೀಸ್ ಠಾಣೆಯ ಪೊಲೀಸರು ದೂರುದಾರರಾದ ಶ್ರೀ ಬುಂಡ ರಾಮ್ ರವರಿಗೆ ದೂರವಾಣಿ ಕರೆ ಮಾಡಿ, ದೂರುದಾರರನ್ನು ಹಾಗೂ ಅವರ ಪತ್ನಿಯನ್ನು ಠಾಣೆಗೆ ಬರುವಂತೆ ತಿಳಿಸಿದ್ದು, ಅದರಂತೆ ಅವರುಗಳು ಠಾಣೆಗೆ ಹೋದಾಗ, ಅವರ ಪತ್ನಿಯನ್ನು ವಿಚಾರಣೆಗೆ ಒಳಪಡಿಸಿದ್ದು, ವಿಚಾರಣೆಯ ನಂತರ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿಸುವುದಾಗಿ ಹೇಳಿ, ಅವರ ಪತ್ನಿಯನ್ನು ಜೀಪಿನಲ್ಲಿ ಕರೆದುಕೊಂಡು ಹೋದ ನಂತರ ದೂರುದಾರರ ಮಕ್ಕಳನ್ನು ಪೊಲೀಸ್ ಠಾಣೆಯ ನೆಲದ ಮೇಲೆ ಕೂರಿಸಿ, ದೂರುದಾರರನ್ನು ಠಾಣೆಯ ಒಳಗೆ ಕರೆಸಿ, ವಿವಸ್ತ್ರಗೊಳಿಸಿ, ಕುಡಿಯಲು ನೀರು ಸಹ ಕೊಡದೇ, ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಲ್ಲೆ ನಡೆಸಿ ಮಾರನೇ ದಿನ ಬಿಡುಗಡೆ ಮಾಡಿರುತ್ತಾರೆಂದು ಆರೋಪಿಸಿದ್ದಾರೆ.

ಎರಡೂ ದೂರರ್ಜಿಗಳ ವಿಷಯವು ಒಂದೇ ಆಗಿದ್ದು, ಹೆಚ್.ಆರ್.ಸಿ ಸಂಖ್ಯೆ.5405/10/31/2016ರೊಂದಿಗೆ ಹೆಚ್.ಆರ್.ಸಿ ಸಂಖ್ಯೆ.5799/10/31/2016 ಅನ್ನು ಒಟ್ಟುಗೂಡಿಸಲಾಗಿದೆ.

ತದನಂತರ, ದಿನಾಂಕ.02.02.2017ರಂದು ಉಪ ಪೊಲೀಸ್ ಆಯುಕ್ತರು, ಪೂರ್ವ ವಿಭಾಗ, ಬೆಂಗಳೂರು ನಗರ ರವರು ಅವರ ವರದಿಯೊಂದಿಗೆ ಕೆ.ಆರ್ ಪುರಂ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರ ದಿನಾಂಕ.11.12.2016ರ ಪತ್ರದ ಅನ್ವಯ ವರದಿಯನ್ನು ಸಲ್ಲಿಸಿರುತ್ತಾರೆ.

ದೂರರ್ಜಿಯ ಬಗ್ಗೆ ಕೆ.ಆರ್ ಪುರಂ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರು ವಿಚಾರಣೆ ಮಾಡಿದ್ದು, ದಿನಾಂಕ.26.08.2016 ರಂದು ಶ್ರೀ ಬುಂಡ ರಾಮ್ ರವರು ನೀಡಿದ ದೂರಿನ ಮೇರೆಗೆ ಠಾಣಾ ಮೊ.ಸಂಖ್ಯೆ.467/2016 ಕಲಂ 397 ಐಪಿಸಿ ರೀತ್ಯ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದು, ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯ ಮೊ.ಸಂಖ್ಯೆ.142/2016 ಕಲಂ 457, 380, 511 ಐಪಿಸಿ ರೀತ್ಯ ಪ್ರಕರಣದ ಆರೋಪಿತರು ದೂರುದಾರರ ಮನೆಯಲ್ಲೂ ಸಹ ಕಳ್ಳತನ ಮಾಡಿರುವುದಾಗಿ ತಮ್ಮ ಸ್ವ–ಇಚ್ಛಾ ಹೇಳಿಕೆ ನೀಡಿರುತ್ತಾರೆ.

ಮೊ.ಸಂಖ್ಯೆ. 142/2016ರ ಪ್ರಕರಣದಲ್ಲಿ ಎ2 ಆರೋಪಿತನಾದ ಶ್ರೀ ರಾಜೇಶ್ @ ರಾಜಾ ಈತನು ದೂರುದಾರರ ಸಂಬಂಧಿಯಾಗಿದ್ದು, ದೂರುದಾರರಾದ ಶ್ರೀಮತಿ ಲೀಲಾ ರವರ ಹೇಳಿಕೆಯನ್ನು ಪಡೆಯುವಾಗ ಸಮಂಜಸವಾದ ಹೇಳಿಕೆ ನೀಡದೇ ತನ್ನ ಸಂಬಂಧಿಯಾದ ಆರೋಪಿತ ಶ್ರೀ ರಾಜೇಶ್ @ ರಾಜಾ ಈತನ ಅಪರಾಧ ಕೃತ್ಯವನ್ನು ಮರೆಮಾಚುವ ಪ್ರಯತ್ನಗಳು ಮೇಲ್ನೋಟಕ್ಕೆ ಕಂಡು ಬಂದಿದ್ದು, ಠಾಣೆಯಲ್ಲಿ ಅಪರಾಧ ಕೃತ್ಯಗಳು ದಾಖಲಾದಲ್ಲಿ ದೂರುದಾರರ/ಎದುರು ಅರ್ಜಿದಾರರ ವಿಚಾರಣೆ ಮಾಡುವುದು ಸಹಜವಾಗಿರುತ್ತದೆ. ದೂರುದಾರರಾದ ಶ್ರೀ ಬುಂಡ ರಾಮ್ ಮತ್ತು ಶ್ರೀಮತಿ ಲೀಲಾ ರವರನ್ನು ವಿಚಾರಣೆ ಮಾಡಿದ್ದೆ ತಪ್ಪೆಂದು ಭಾವಿಸಿ ಪೊಲೀಸರು ಹಿಂಸೆ ನೀಡಿದರೆಂದು ದೂರು ನೀಡಿರುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿರುತ್ತದೆಂದು ವರದಿ ನೀಡಿ, ದೂರುದಾರರುಗಳು ಮಾಡಿರುವ ಆರೋಪವನ್ನು ನಿರಾಕರಿಸಿರುತ್ತಾರೆ. ಅಲ್ಲದೇ ದೂರುದಾರರಾದ ಶ್ರೀಮತಿ ಲೀಲಾ ರವರಿಗೆ ಈ ಬಗ್ಗೆ ಹಿಂಬರಹ ನೀಡಿರುವುದಾಗಿ ವರದಿ ನೀಡಿದ್ದು, ಸದರಿ ದೂರು ಅರ್ಜಿಯನ್ನು ಮುಕ್ತಾಯ ಮಾಡಬೇಕೆಂದು ಕೋರಿರುತ್ತಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ಅಂಚೆ ಲಕೋಟೆ ಜಾರಿ ಆಗಿ ಸ್ವೀಕೃತಿ ಬಂದಿದ್ದು, ದೂರುದಾರರಿಂದ ಅಭಿಪ್ರಾಯ ಬಂದಿರುವುದಿಲ್ಲ.

ದೂರರ್ಜಿ, ವರದಿ ಮತ್ತು ದೂರುದಾರರು ಸಲ್ಲಿಸಿದ್ದ ವೈದ್ಯಕೀಯ ಪ್ರಮಾಣ ಪತ್ರದ ಪ್ರತಿಗಳನ್ನು ಪರಿಶೀಲಿಸಲಾಗಿ ಕೆ.ಆರ್. ಪುರಂ ಪೊಲೀಸ್ ಠಾಣೆಯ ಪೊಲೀಸರು ದೂರುದಾರರಿಗೆ ಹಿಂಸೆ ನೀಡಿ ಹಲ್ಲೆ ನಡೆಸಿರುವುದು ಕಂಡು ಬಂದಿರುತ್ತದೆ. ಆದರೆ ಈ ದಾಖಲೆಗಳನ್ನು ಪರಿಗಣಿಸದೇ ಪೊಲೀಸರು ಹಲ್ಲೆ ಮಾಡಿರುವುದಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾದ ಸಂಗತಿ ಆಗಿರುತ್ತದೆಂದು ದೂರುದಾರರ ಆರೋಪವನ್ನು ಪೊಲೀಸರು ನಿರಾಕರಿಸಿರುತ್ತಾರೆಂದು ವರದಿ ಮಾಡಿರುವುದು ಸಮರ್ಪಕವಾಗಿ ಕಂಡು ಬಂದಿರುವುದಿಲ್ಲ. ಆದುದರಿಂದ ಈ ಘಟನೆಯ ಬಗ್ಗೆ ದೂರುದಾರರಾದ ಶ್ರೀಮತಿ ಲೀಲಾ ಹಾಗೂ ಅವರೊಂದಿಗೆ ಅವರ ಪತಿಯಾದ ಶ್ರೀ ಬುಂಡ ರಾಮ್ ಮತ್ತು ಅಂದಿನ ಆರಕ್ಷಕ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪ ಅವರುಗಳನ್ನು ಮುಖಾಮುಖಿ ವಿಚಾರಣೆ ಮಾಡಲು ಆಯೋಗವು ತೀರ್ಮಾನಿಸಿ, ಸದರಿಯವರಿಗೆ ನೋಟಿಸ್ ಜಾರಿ ಮಾಡಿದ್ದು, ದಿನಾಂಕ.15.02.2020ರಂದು ಶ್ರೀಮತಿ ಲೀಲಾ, ಅವರ ಪತಿ ಶ್ರೀ ಬುಂಡ ರಾಮ್ ಹಾಗೂ ಆರಕ್ಷಕ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪ ರವರುಗಳು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀಮತಿ ಲೀಲಾ ಹಾಗೂ ಅವರ ಪತಿ ಶ್ರೀ ಬುಂಡ ರಾಮ್ ರವರುಗಳು ಆಯೋಗದ ಮುಂದೆ ಅವರುಗಳ ಹೇಳಿಕೆಗಳನ್ನು ನೀಡಿರುತ್ತಾರೆ ಹಾಗೂ ಆರಕ್ಷಕ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪ ರವರು ಅವರ ಲಿಖಿತ ಸಮಜಾಯಿಷಿಯನ್ನು ನೀಡಲು ಕಾಲವಕಾಶವನ್ನು ಕೋರಿರುತ್ತಾರೆ.

<u>ದಿನಾಂಕ.15.02.2020 ರಂದು ಶ್ರೀಮತಿ ಲೀಲಾರವರು ಆಯೋಗದ ಮುಂದೆ ನೀಡಿರುವ ಹೇಳಿಕೆ ಈ ಕೆಳಕಂಡಂತೆ ಇದೆ:</u>

> *"On 26.08.2016 an incident of dacoty happened in my house at around 01.00 P.M. After the incident, I along with my husband went to lodge complaint at K.R. Puram Police Station. Thereafter K.R. Puram Police called us several times and both of us had always gone to police station whenever they called. On 30.08.2016 myself and my husband were called to the police station by Sri Melwin Francis, Sub-Inspector of Police. Both of us went to the police station at around 06.00 P.M. At the police station Sri Melwin Francis, Sub-Inspector of Police told me that the Commissioner wants to talk to me and therefore I should go along with the Police to the*

*Commissioner. At that time, my husband wanted to come along with me but police told my husband to stay back and she will return back within half-an-hour. I was then taken to a place which appeared to be some other police station. There police started pressurizing me to accept that I have done the theft which happened in my house. As this was not accepted, I kept quite. After this, the police tied my hands, legs and covered my eyes with cloth, so that I cannot see and started assaulting me mercilessly. They kept on abusing and assaulting me and also started putting false statements that I am involved with another man and that my husband was involved with another lady. Thereafter, I was made to sit in a vehicle and taken to various places in the vehicle. There was one woman police and one male police constable in the vehicle. Thereafter in the morning at 06.00 A.M I was taken to K.R. Puram Bus Stand and my children were called to K.R. Puram Bus Stand there me and my children and were sent in an auto to my house. I went in the auto to the house and at that time I could not climb up the stairs, I was bodily lifted by lady who came there and taken to my house in the fourth floor. In the evening I was taken by my husband who came back from police station after his release to Bowring Hospital, Bengaluru. I was examined at Bowring Hospital. The copies of the examination report at Bowring Hospital has been given along with my complaint. As my condition was not well, I was thereafter taken by my husband to Chinmaya Hospital for further treatment."*

<u>ದಿನಾಂಕ.15.02.2020 ರಂದು ಶ್ರೀ ಬುಂಡ ರಾಮ್ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆ ಈ ಕೆಳಕಂಡಂತೆ ಇದೆ:</u>

> *"For the dacoity incident that happened in my house on 26.08.2016 I had gone to Police Station along with my wife to lodge complaint. After the complaint was lodged I was called a number of times and I had gone as and when I was called. On 30.08.2016 I was called by P.S.I. Sri Melvin Francis to the Police Station to come along with my wife. I had then gone along with my wife to Police Station at about 6.00 P.M. At the Police Station police enquired about the theft for a while and thereafter, they took my wife saying that the Commissioner would like to meet her and I was not allowed to accompany her and after she left I was asked to go telling that we will call you and you come and take your wife. After this I went home. At home at 9.00 P.M. the police called me and when I asked as to why should I come, has my wife come back, the police said that she has not come back but you come for a while and come along with your children. At the Police Station my children were made to sit outside the Police Station and I was taken inside the Police Station and my clothes were removed and thereafter I was mercilessly beaten up for the whole night. Neither me nor my children were given food and water. In the morning at around 7.00-8.00 A.M. I was asked to go home. Meanwhile, I received a phone from my son that my wife has returned but she is not able to climb up the stairs to the house as she has been badly beaten up. At this time when I questioned Sri Melvin Fancis P.S.I., over phone then he had sent a lady who took my wife upstairs to*

*the house. Thereafter, in the night I took my wife to the Bowring Hospital and thereafter to Chinamaya Mission Hospital for treatment."*

ತದನಂತರ ಶ್ರೀಮತಿ ಲೀಲಾ ಹಾಗೂ ಶ್ರೀ ಬುಂಡ ರಾಮ್ ರವರ ಹೇಳಿಕೆಗಳ ಮೇರೆಗೆ ಅಂದಿನ ಪೊಲೀಸ್ ಉಪ–ನಿರೀಕ್ಷಕರಾದ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರನ್ನು ವಿಚಾರಣೆ ಮಾಡುವುದು ಅವಶ್ಯಕತೆ ಇರುವುದರಿಂದ ಸದರಿಯವರು ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ಜಾರಿ ಮಾಡಲಾಗಿತ್ತು.

ದಿನಾಂಕ.29.02.2020 ರಂದು ಶ್ರೀ ಸಂಜೀವರಾಯಪ್ಪ ರವರು ಆಯೋಗದ ಮುಂದೆ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಅವರ ಲಿಖಿತ ಸಮಜಾಯಿಷಿಯಲ್ಲಿ ಶ್ರೀ ಬುಂಡ ರಾಮ್ ರವರು ನೀಡಿದ ದೂರಿನ ಆಧಾರದ ಮೇಲೆ ಮೊ.ಸ.467/2016 ಕಲಂ 397 ಐಪಿಸಿ ರೀತ್ಯ ಪಕರಣ ದಾಖಲಿಸಿ ತನಿಖೆ ಕೈಗೊಂಡಿದ್ದು, ಘಟನಾ ಸ್ಥಳವನ್ನು ಪರಿಶೀಲನೆ ಮಾಡಿ ಕೃತ್ಯ ನಡೆದ ಸ್ಥಳವು ಕಟ್ಟಡದ ನಾಲ್ಕನೇ ಅಂತಸ್ತಿನ ಮಹಡಿಯಲ್ಲಿರುವ ಮನೆಯಾಗಿದ್ದು, ಅದೇ ಕಟ್ಟಡದಲ್ಲಿ ವಾಸವಿದ್ದ ಇತರೇ ಅಕ್ಕಪಕ್ಕದ ಮನೆಯವರನ್ನು ವಿಚಾರ ಮಾಡಲಾಗಿ, ಅವರುಗಳು ಘಟನೆ ನಡೆದ ದಿನಾಂಕದಂದು ಮಧ್ಯಾಹ್ನ ತಮ್ಮ ತಮ್ಮ ಮನೆಗಳಲ್ಲಿದ್ದು, ಕೃತ್ಯ ನಡೆದಿರುವ ಸಂಬಂಧ ಯಾವುದೇ ಕಿರುಚಾಟ, ಚೀರಾಟ ಮತ್ತು ಅಪರಿಚಿತ ವ್ಯಕ್ತಿಗಳ ಓಡಾಟ ಕಂಡುಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಸಂಬಂಧ ಶ್ರೀ ಬುಂಡ ರಾಮ್ ರವರ ಗಿರಿವಿ ಅಂಗಡಿಯಲ್ಲಿ ಚಿನ್ನಾಭರಣಗಳನ್ನು ಅಡವಿಟ್ಟ ಗ್ರಾಹಕರು ಕೂಡ ಸ್ಥಳಕ್ಕೆ ಬಂದು ಅಕ್ಕಪಕ್ಕದವರನ್ನು ವಿಚಾರ ಮಾಡಿದ್ದು, ಅವರಿಗೂ ಘಟನೆ ನಡೆದಿರುವ ಬಗ್ಗೆ ಅನುಮಾನ ಉಂಟಾಗಿ ಹಾಗೂ ಅದೇ ಗ್ರಾಹಕರು ಪೊಲೀಸ್ ಠಾಣೆಗೆ ಬಂದು ಶ್ರೀಮತಿ ಲೀಲಾ ರವರೆ ಎಲ್ಲಾ ಆಭರಣಗಳನ್ನು ಅವರಿಗೆ ಪರಿಚಯವಿರುವವರ ಮೂಲಕ ಕಳ್ಳತನ ಮಾಡಿಸಿ ಗ್ರಾಹಕರಿಗೆ ಮೋಸ ಮತ್ತು ಅನ್ಯಾಯ ಮಾಡಿರುತ್ತಾರೆಂದು ಹಾಗೂ ಅವರನ್ನು ಠಾಣೆಗೆ ಕರೆಯಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕೆಂದು ಪ್ರತಿ ದಿನ ಒತ್ತಾಯಿಸುತ್ತಿದ್ದು, ವಿಚಾರಣೆ ಮಾಡದೇ ಇದ್ದಲ್ಲಿ ಪೊಲೀಸ್ ಠಾಣೆಯ ಮುಂದೆ ಹಾಗೂ ದೂರುದಾರರ ಮನೆಯ ಮುಂದೆ ಧರಣಿ ಮಾಡುವುದಾಗಿ ಎಚ್ಚರಿಸಿರುತ್ತಾರೆ.

ದೂರುದಾರರಾದ ಶ್ರೀಮತಿ ಲೀಲಾ ರವರ ವಿಚಾರಣಾ ಸಮಯದಲ್ಲಿ ಅವರುಗಳು ನೀಡಿದ ಹೇಳಿಕೆಗಳು ಒಂದಕ್ಕೊಂದು ತಾಳೆಯಾಗದೆ ಗೊಂದಲ ಉಂಟಾಗಿದ್ದರಿಂದ ಮರು ವಿಚಾರಣೆಗಾಗಿ ಶ್ರೀ ಬುಂಡ ರಾಮ್ ಹಾಗೂ ಶ್ರೀಮತಿ ಲೀಲಾ ರವರನ್ನು ದಿನಾಂಕ.30.08.2016 ರಂದು ಠಾಣೆಗೆ ಬರುವಂತೆ

ತಿಳಿಸಿದಾಗ ಶ್ರೀಮತಿ ಲೀಲಾ ರವರು ಅವರ ಸಂಬಂಧಿಕರು ಹಾಗೂ ಅವರ ವಕೀಲರೊಂದಿಗೆ ಠಾಣೆಗೆ ಹಾಜರಾಗಿದ್ದು, ಸದರಿಯವರನ್ನು ಅವರ ವಕೀಲರು ಹಾಗೂ ಮಹಿಳಾ ಸಿಬ್ಬಂದಿಯವರು ಹಾಗೂ ಚಿನ್ನಾಭರಣಗಳನ್ನು ಶ್ರೀ ಬುಂಡ ರಾಮ್ ರವರ ಗಿರಿವಿ ಅಂಗಡಿಯಲ್ಲಿ ಅಡಮಾನ ಇಟ್ಟಿದ್ದ ಗ್ರಾಹಕರ ಸಮಕ್ಷಮದಲ್ಲಿ ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಂಡಿದ್ದು, ಅವರ ಹೇಳಿಕೆಯ ನಂತರ ಅವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ಆಸ್ಪತ್ರೆಗೆ ಹೋಗುವುದಾಗಿ ತಿಳಿಸಿ ಅವರ ವಕೀಲರು ಮತ್ತು ಸಂಬಂಧಿಕರ ಜೊತೆಯಲ್ಲಿ ಹೋಗಿರುತ್ತಾರೆ. ದೂರುದಾರರನ್ನು ಠಾಣೆಗೆ ಕರೆಯಿಸಿ ಗ್ರಾಹಕರ ಸಮಕ್ಷಮದಲ್ಲಿಯೆ ವಿಚಾರಣೆ ಮಾಡಿ ಹೇಳಿಕೆ ಪಡೆದು ಕಳುಹಿಸಿಕೊಟ್ಟಿರುತ್ತೇವೆಯೇ ವಿನ: ದೂರುದಾರರ ದೂರಿನಲ್ಲಿ ಆರೋಪಿಸಿರುವಂತೆ ಯಾವುದೇ ಅಜ್ಞಾತ ಸ್ಥಳಕ್ಕೆ ಅವರನ್ನು ಕರೆದುಕೊಂಡು ಹೋಗಿ ನಾನಾಗಲೀ, ಸಿಬ್ಬಂದಿಯವರಾಗಲೀ ಆಕೆಗೆ ಯಾವುದೇ ರೀತಿಯ ಹಿಂಸೆ ನೀಡಿರುವುದಿಲ್ಲ. ಮೊ.ಸ 467/2016 ಪ್ರಕರಣದಲ್ಲಿ ದರೋಡೆಯಾಗಿದೆ ಎಂದು ಹೇಳಲಾದ ಚಿನ್ನಾಭರಣಗಳನ್ನು ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪತ್ತೆಯಾಗಿದ್ದು, ಆರೋಪಿತರ ವಿಚಾರಣಾ ಕಾಲದಲ್ಲಿ ಎ2 ಆರೋಪಿಯಾದ ಶ್ರೀ ರಾಜೇಶ್ ಎಂಬಾತನು ಪ್ರಕರಣದ ಪಿರ್ಯಾದುದಾರರಾದ ಶ್ರೀ ಬುಂಡ ರಾಮ್ ರವರ ಸ್ವಗ್ರಾಮದವರೇ ಆಗಿದ್ದು, ಈತನು ಶ್ರೀ ಬುಂಡ ರಾಮ್ ರವರ ಚಿಕ್ಕಮ್ಮನ ಮಗನಾಗಿರುತ್ತಾನೆಂದು ಅವರ ವಿಚಾರಣಾ ಕಾಲದಲ್ಲಿ ಸ್ವ-ಇಚ್ಛಾ ಹೇಳಿಕೆ ನೀಡಿದ್ದು, ಕೃತ್ಯ ನಡೆಯುವ ಎರಡು ದಿನಗಳ ಹಿಂದೆ ಶ್ರೀ ಬುಂಡ ರಾಮ್ ರವರ ಮನೆಗೆ ಸಹ ಹೋಗಿ ಬಂದಿರುವುದಾಗಿ ತಿಳಿಸಿರುತ್ತಾನೆ. ಆದರೆ ಈ ಬಗ್ಗೆ ಶ್ರೀ ಬುಂಡ ರಾಮ್ ರವರಾಗಲೀ ಹಾಗೂ ಶ್ರೀ ಲೀಲಾ ರವರಾಗಲೀ ಅವರ ವಿಚಾರಣಾ ಕಾಲದಲ್ಲಿ ಯಾವುದೇ ವಿಚಾರ ತಿಳಿಸದೇ ಮರೆಮಾಚಿಸಿರುತ್ತಾರೆ.

ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಚಿನ್ನಾಭರಣಗಳು ಪತ್ತೆಯಾದ ವಿಷಯವನ್ನು ತಿಳಿದುಕೊಂಡು ಗ್ರಾಹಕರು ಆಗಿಂದಾಗ್ಗೆ ಠಾಣೆಗೆ ಬಂದು ಪ್ರಕರಣದಲ್ಲಿ ಭಾಗಿಯಾದ ಆರೋಪಿಯು ಶ್ರೀ ಬುಂಡ ರಾಮ್ ಸಂಬಂಧಿಕರಾಗಿರುವುದರಿಂದ ಶ್ರೀ ಬುಂಡ ರಾಮ್ ಹಾಗೂ ಶ್ರೀಮತಿ ಲೀಲಾ ರವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದು, ಇದನ್ನರಿತ ಶ್ರೀ ಬುಂಡ ರಾಮ್ ಹಾಗೂ ಶ್ರೀ ಲೀಲಾ ಭಾವಿಸಿ, ತನಿಖೆಯ ದಿಕ್ಕು ತಪ್ಪಿಸಲು ಮತ್ತು ಗ್ರಾಹಕರ ಒತ್ತಾಯದಿಂದ ತಪ್ಪಿಸಿಕೊಳ್ಳಲು ಅವರ ವಕೀಲರ ಮಾರ್ಗದರ್ಶನದಲ್ಲಿ ಸುಳ್ಳು ವೈದ್ಯಕೀಯ ಚಿಕಿತ್ಸೆ ಪಡೆದು, ಶ್ರೀ ಬುಂಡ ರಾಮ್ ಹಾಗೂ ಶ್ರೀಮತಿ ಲೀಲಾ ರವರು ಪೊಲೀಸರ ಮೇಲೆ ಸುಳ್ಳು ಆರೋಪ ಮಾಡಿದರೆ ಅವರುಗಳನ್ನು ಪೊಲೀಸರು ವಿಚಾರಣೆ ಮಾಡುವುದಿಲ್ಲವೆಂಬ ದುರುದ್ದೇಶ ಹೊಂದಿ, ಅದರಂತೆ ಮಾನ್ಯ ಆಯೋಗದಲ್ಲಿ ಸತ್ಯಕ್ಕೆ ದೂರವಾದ ಆರೋಪಗಳನ್ನು ಮಾಡಿ ಅರ್ಜಿಯನ್ನು ನೀಡಿರುತ್ತಾರೆ. ಆದ್ದರಿಂದ ಮೇಲ್ಕಂಡ ಅಂಶಗಳನ್ನು

ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಸಂಜೀವರಾಯಪ್ಪನವರು ಅವರನ್ನು ದೋಷಾರೋಪಗಳಿಂದ ಮುಕ್ತರನ್ನಾಗಿಸಬೇಕೆಂದು ಕೋರಿ ಕೊಂಡಿರುತ್ತಾರೆ.

ಶ್ರೀ ಸಂಜೀವರಾಯಪ್ಪ ನವರ ಲಿಖಿತ ಸಮಜಾಯಿಷಿಯಲ್ಲಿ ಶ್ರೀ ಬುಂಡ ರಾಮ್/ಶ್ರೀಮತಿ ಲೀಲಾ ರವರ ಬಳಿ ಒಡವೆಗಳನ್ನು ಗಿರವಿ ಇಟ್ಟಿದ ಗ್ರಾಹಕರು ಪೊಲೀಸ್ ಠಾಣೆಗೆ ಬಂದು ಶ್ರೀ ಬುಂಡ ರಾಮ್/ಶ್ರೀಮತಿ ಲೀಲಾ ರವರು ನೀಡಿರುವ ದೂರಿನ ಬಗ್ಗೆ ಸಂಶಯವಿದ್ದು, ಅವರುಗಳನ್ನು ಪ್ರಶ್ನಿಸಿ ಎಂದು ಪೊಲೀಸರಿಗೆ ಒತ್ತಾಯಿಸುತ್ತಿದ್ದಾರೆಂದು ಹೇಳಿರುತ್ತಾರೆ. ಆದ್ದರಿಂದ ಆಯೋಗವು ಶ್ರೀ ಸಂಜೀವರಾಯಪ್ಪರವರಿಗೆ ಒಡವೆ ಗಿರಿವಿ ಇಟ್ಟಿರುವವರ ಹೆಸರುಗಳು ಹಾಗೂ ಅವರುಗಳು ಪೊಲೀಸರಿಗೆ ಶ್ರೀ ಬುಂಡ ರಾಮ್/ಶ್ರೀಮತಿ ಲೀಲಾ ರವರನ್ನು ಪ್ರಶ್ನಿಸಲು ಒತ್ತಾಯಿಸಿರುವ ಬಗ್ಗೆ ಎಸ್.ಎಚ್.ಡಿ ಪುಸ್ತಕದಲ್ಲಿ ನಮೂದು ಮಾಡಿರುವ ದಾಖಲಾತಿಗಳನ್ನು ಹಾಜರುಪಡಿಸುವಂತೆ ಆದೇಶಿಸಲಾಗಿತ್ತು. ಅದರಂತೆ ದಿನಾಂಕ.30.09.2020 ರಂದು ಆಯೋಗದ ಮುಂದೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಸಂಜೀವರಾಯಪ್ಪ ಹಾಗೂ ಶ್ರೀ ಬುಂಡ ರಾಮ್ ರವರು ಹಾಜರಾಗಿದ್ದು, ಶ್ರೀ ಸಂಜೀವರಾಯಪ್ಪ ನವರು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಶ್ರೀ ಸಂಜೀವರಾಯಪ್ಪನವರಿಗೆ ಸದರಿ ದಾಖಲೆಗಳನ್ನು ಮುಂದಿನ ದಿನಾಂಕದಂದು ಹಾಜರುಪಡಿಸುವಂತೆ ಹಾಗೂ ಪೊಲೀಸ್ ನಿರೀಕ್ಷಕರಾದ ಶ್ರೀ ಮೆಲ್ವಿನ್ ಫ್ರಾನ್ಸಿಸ್ (ಅಂದಿನ ಪಿ.ಎಸ್.ಐ, ಕೆ.ಆರ್.ಪುರಂ. ಪೊಲೀಸ್ ಠಾಣೆ) ರವರು ವಿಚಾರಣೆಗೆ ಹಾಜರಾಗುವಂತೆ ಆದೇಶಿಸಲಾಗಿತ್ತು.

ತದನಂತರ, ದಿನಾಂಕ.07.11.2020 ರಂದು ಪೊಲೀಸ್ ನಿರೀಕ್ಷಕರಾದ ಶ್ರೀ ಮೆಲ್ವಿನ್ ಫ್ರಾನ್ಸಿಸ್ (ಅಂದಿನ ಪಿ.ಎಸ್.ಐ, ಕೆ.ಆರ್.ಪುರಂ. ಪೊಲೀಸ್ ಠಾಣೆ) ಹಾಗೂ ದೂರುದಾರರಾದ ಶ್ರೀ ಬುಂಡ ರಾಮ್ ರವರುಗಳು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ಆಯೋಗದ ಮುಂದೆ ಅವರ ಹೇಳಿಕೆಯನ್ನು ನೀಡಿರುತ್ತಾರೆ. ಅವರ ಹೇಳಿಕೆಯು ಕೆಳಕಂಡಂತಿದೆ:

> *"......ದಿನಾಂಕ.26.08.2016ರಂದು ಶ್ರೀ ಬುಂಡಾರಾಮ್ ರವರ ಮನೆಯಲ್ಲಿ ಯಾರೋ ಅಪರಿಚಿತ ವ್ಯಕ್ತಿಗಳು ಅವರ ಮನೆಗೆ ನುಗ್ಗಿ ಅವರ ಪತ್ನಿ ಶ್ರೀಮತಿ ಲೀಲಾ ರವರನ್ನು ಕಟ್ಟಿ ಹಾಕಿ ಅವರ ಮೇಲೆ ಹಲ್ಲೆ ನಡೆಸಿ ಮನೆಯಲ್ಲಿರುವ ಒಡವೆಗಳನ್ನು ದರೋಡೆ ಮಾಡಿಕೊಂಡು ಹೋಗಿರುವ ಬಗ್ಗೆ ಕೊಟ್ಟ ದೂರಿನ ಮೇರೆಗೆ ಕೆ.ಆರ್. ಪುರಂ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ. 467/2016 ಕಲಂ 397 ಐಪಿಸಿ ರನ್ವಯ ಪ್ರಕರಣ ದಾಖಲಾಗಿರುತ್ತದೆ.*

ಈ ಪ್ರಕರಣದ ದೂರಿಗೆ ಸಂಬಂಧಿಸಿದಂತೆ ಪಿ.ಐ ಶ್ರೀ ಸಂಜೀವ್‌ರಾಯಪ್ಪನವರು ತನಿಖಾಧಿಕಾರಿಯಾಗಿದ್ದು, ಅವರ ತನಿಖೆಗೆ ಸಹಕರಿಸಿ ತನಿಖೆ ನಡೆಸಿರುತ್ತೇನೆ. ಶ್ರೀ ಬುಂಡಾರಾಮ್ ರವರ ಅಂಗಡಿಯಲ್ಲಿ ದಿನಾಂಕ.30.08.2016ರಂದು ಹಾಗೂ ಇತರ ದಿನಾಂಕಗಳಂದು ಅಡವಿಟ್ಟಿದ್ದ ತಮ್ಮ ಒಡವೆಗಳನ್ನು ಗ್ರಾಹಕರುಗಳು ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಸಂಜೀವ್‌ರಾಯಪ್ಪನವರ ಬಳಿ ಬಂದು ಅಡವಿಟ್ಟ ಒಡವೆಗಳನ್ನು ಶ್ರೀ ಬುಂಡಾರಾಮ್ ರವರು ಕೊಡುತ್ತಿಲ್ಲವೆಂದು, ಕಳ್ಳತನವಾಗುವ ಒಂದು ವಾರದ ಹಿಂದೆ ನಾನು ಒಡವೆಗಳನ್ನು ಬಿಡಿಸಿಕೊಳ್ಳಲು ಹೋದಾಗ ಒಂದು ವಾರದೊಳಗೆ ಒಡವೆಗಳನ್ನು ಕೊಡುತ್ತೇನೆ ಎಂದು ಹೇಳಿ ಕಳುಹಿಸಿದ್ದು, ಒಂದು ವಾರದ ನಂತರ ಮತ್ತೆ ಹೋದಾಗ ಒಡವೆಗಳು ಕಳ್ಳತನವಾಗಿರುವ ಬಗ್ಗೆ ಶ್ರೀ ಬುಂಡಾರಾಮ್ ಹೇಳುತ್ತಿದ್ದು, ಈ ಬಗ್ಗೆ ನಮಗೆ ಬುಂಡಾರಾಮ್ ಮೇಲೆ ಅನುಮಾನ ಇರುವುದಾಗಿ ಈ ಬಗ್ಗೆ ಕೂಲಂಕಷವಾಗಿ ವಿಚಾರಣೆ ಮಾಡುವಂತೆ ದೂರು ದಾಖಲಿಸಿರುತ್ತಾರೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀ ಬುಂಡಾರಾಮ್ ಮತ್ತು ಅವರ ಪತ್ನಿ ಶ್ರೀಮತಿ ಲೀಲಾ ರವರನ್ನು ಕೆ.ಆರ್. ಪುರಂ ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದ್ದು, ಅದರಂತೆ ಸದರಿಯವರು ಠಾಣೆಗೆ ಅವರ ಸಂಬಂಧಿಗಳು ಹಾಗೂ ಅವರ ವಕೀಲರೊಂದಿಗೆ ಠಾಣೆಗೆ ಹಾಜರಿರುತ್ತಾರೆ. ಆಗ ಅವರ ಸಂಬಂಧಿಕರು, ಅವರ ವಕೀಲರು ಹಾಗೂ ದೂರುದಾರರ ಸಮಕ್ಷಮವೇ ವಿಚಾರಣೆ ನಡೆಸಿರುತ್ತೇವೆ.

ಪ್ರಕರಣದ ವಿಚಾರಣಾ ಸಮಯದಲ್ಲಿ ಶ್ರೀ ಬುಂಡಾರಾಮ್ ಹಾಗೂ ಅವರ ಪತ್ನಿ ಶ್ರೀಮತಿ ಲೀಲಾ ರವರು ನೀಡಿದ ಹೇಳಿಕೆಯಲ್ಲಿ ಒಂದಕ್ಕೊಂದು ತಾಳೆಯಾಗದೆ ಇದ್ದುದರಿಂದ ಹಾಗೂ ಸದರಿಯವರ ಅಂಗಡಿಯಲ್ಲಿ ಒಡವೆಗಳನ್ನು ಅಡಮಾನವಿಟ್ಟಿದ್ದ ವ್ಯಕ್ತಿಗಳು ಠಾಣೆಗೆ ಬಂದು, ಹಲವಾರು ಬಾರಿ ಒಡವೆಗಳನ್ನು ಬಿಡಿಸಿಕೊಳ್ಳಲು ಹೋದಾಗ ಶ್ರೀ ಬುಂಡಾರಾಮ್ ರವರು ಒಡವೆಗಳು ಬ್ಯಾಂಕಿನ ಲಾಕರ್‌ನಲ್ಲಿಟ್ಟಿರುವುದಾಗಿ ತಿಳಿಸಿದ್ದು, ಕೆಲವು ದಿನಗಳ ನಂತರ ತಮ್ಮ ಮನೆಯಲ್ಲಿ ಒಡವೆಗಳು ಕಳ್ಳತನವಾಗಿದೆ ಎಂದು ತಿಳಿಸಿದ್ದು, ಈ ವಿಚಾರದ ಬಗ್ಗೆ ಅಡವಿಟ್ಟ ಗ್ರಾಹಕರು ನಮಗೆ ಶ್ರೀ ಬುಂಡಾರಾಮ್ ರವರ ಮೇಲೆ ಅನುಮಾನ ಇರುವುದಾಗಿ ಈ ಬಗ್ಗೆ ಕೂಲಂಕಷವಾಗಿ ತನಿಖೆ ಮಾಡಲು ದೂರುಗಳನ್ನು ನೀಡಿದ್ದರಿಂದ ಶ್ರೀ ಬುಂಡಾರಾವ್ ಹಾಗೂ ಅವರ ಪತ್ನಿ ಶ್ರೀಮತಿ ಲೀಲಾ ರವರನ್ನು ಠಾಣೆಗೆ ಪುನ: ಕರೆಸಿ ವಿಚಾರಣೆ ಮಾಡಿರುತ್ತೇವೆ.

ನಂತರ ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಿನಾಂಕ.12.09.2016 ರಂದು ಆರೋಪಿ ಶ್ರೀ ರಾಜೇಶ್ ಹಾಗೂ ಆತನ ಸಹಚರರನ್ನು ದಸ್ತಗಿರಿ ಮಾಡಿದ್ದು, ಕೆ.ಆರ್ ಪುರಂ ಪೊಲೀಸ್ ಠಾಣೆಯ ಮೊ.ಸಂಖ್ಯೆ.467/2016 ಕ್ಕೆ ಸಂಬಂಧಿಸಿದಂತೆ

ದರೋಡೆ ಮಾಡಿದ ಮಾಲುಗಳನ್ನು ನಾವೆ ಕಳ್ಳತನ ಮಾಡಿರುತ್ತೇವೆಂದು ಒಪ್ಪಿಕೊಂಡಿರುವ ಬಗ್ಗೆ ಆರ್.ಎಂ.ಸಿ ಯಾರ್ಡ್ ಪೊಲೀಸ್ ಠಾಣೆಯವರು ನಮಗೆ ತಿಳಿಸಿದ್ದು, ನಂತರ ನಾನು ಹಾಗೂ ಸಿಬ್ಬಂದಿ ಸದರಿ ಆರ್.ಎಂ.ಸಿ ಠಾಣೆಗೆ ಭೇಟಿ ನೀಡಿ ವಿಚಾರಿಸಲಾಗಿ ದಸ್ತಗಿರಿಯಾಗಿದ್ದ ಆರೋಪಿ ಶ್ರೀ ರಾಜೇಶ್ @ ರಾಜು ಎಂಬ ವ್ಯಕ್ತಿ ಶ್ರೀ ಬುಂಡಾರಾಮ್ ರವರ ಸಂಬಂಧಿಕನಾಗಿದ್ದು, ಸದರಿ ವ್ಯಕ್ತಿ ಈ ದರೋಡೆ ಆಗುವ ಒಂದು ವಾರದ ಮುಂಚೆ ಶ್ರೀ ಬುಂಡಾರಾಮ್ ರವರ ಅಂಗಡಿಗೆ ಹೋಗಿ ಭೇಟಿ ಮಾಡಿ ಮಾತನಾಡಿಸಿಕೊಂಡು, ನಂತರ ದರೊಡೆ ನಡೆಸಿರುವುದಾಗಿ ತಿಳಿಸಿರುತ್ತಾರೆ. ಈ ವಿಚಾರ ಅಂಗಡಿಯಲ್ಲಿ ಅಡವಿಟ್ಟಿದ್ದ ಕೆಲವು ಗ್ರಾಹಕರಿಗೂ ತಿಳಿದು ಸದರಿಯವರು ಠಾಣೆಗೆ ಬಂದು ಶ್ರೀ ರಾಜೇಶ್ ರವರು ಶ್ರೀ ಬುಂಡಾರಾಮ್ ರವರ ಸಂಬಂಧಿಕನಾಗಿದ್ದು, ಇವರೆಲ್ಲರೂ ಸೇರಿ ಒಳಸಂಚು ನಡೆಸಿ ನಮ್ಮ ಒಡವೆಗಳನ್ನುಅವರೆ ತೆಗೆದುಕೊಂಡು ಹೋಗಿದ್ದು, ನಮ್ಮಗಳಿಗೆ ಮೋಸ ಮಾಡಿರುತ್ತಾರೆಂಬ ಅನುಮಾನವಿದ್ದು, ಈ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಸಿ, ಇಲ್ಲದಿದ್ದಲ್ಲಿ ನಾವು ಶ್ರೀ ಬುಂಡಾರಾಮ್ ರವರ ಅಂಗಡಿ ಹಾಗೂ ನಿಮ್ಮ ಠಾಣೆಯ ಮುಂದೆ ಧರಣಿ ನಡೆಸುವುದಾಗಿ ತಿಳಿಸಿರುತ್ತಾರೆ. ಆದುದರಿಂದ ಶ್ರೀ ಬುಂಡಾರಾಮ್ ಹಾಗೂ ಅವರ ಪತ್ನಿ ಶ್ರೀಮತಿ ಲೀಲಾ ರವರನ್ನು ಠಾಣೆಗೆ ಕರೆಸಿದ್ದು, ಅವರ ವಕೀಲರು ಹಾಗೂ ಅವರ ಸಂಬಂಧಿಕರ ಸಮಕ್ಷಮದಲ್ಲೇ ವಿಚಾರಣೆ ಮಾಡಿರುತ್ತೇವೆ.

ಶ್ರೀಮತಿ ಲೀಲಾರವರನ್ನು ಕೆ.ಆರ್. ಪುರಂ ಪೊಲೀಸ್ ಠಾಣೆಯಲ್ಲಿ ಅವರ ಪತಿ ಶ್ರೀ ಬುಂಡಾರಾಮ್ ಹಾಗು ಅವರ ಸಂಬಂಧಿಕರ ಸಮಕ್ಷಮದಲ್ಲೇ ವಿಚಾರಣೆ ಮಾಡಲಾಗಿರುತ್ತದೆ. ಅವರು ದೂರಿನಲ್ಲಿ ಹೇಳಿರುವಂತೆ ಅವರಿಗೆ ಯಾವುದೇ ಹಿಂಸೆ ನೀಡಿರುವುದಿಲ್ಲ. ಆದರೆ ಸದರಿ ಪ್ರಕರಣದಲ್ಲಿ ಅವರ ಅಂಗಡಿಯಲ್ಲಿ ಒಡವೆಗಳನ್ನು ಅಡವಿಟ್ಟಿದ್ದ ವ್ಯಕ್ತಿಗಳು ಹಾಗೂ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿ ಶ್ರೀ ರಾಜೇಶ್ ರವರು ಶ್ರೀ ಬುಂಡಾರಾಮ್ ರವರ ಸಂಬಂಧಿಯಾಗಿದ್ದರಿಂದ ಅವರನ್ನು ಹೆಚ್ಚಿನ ಮಾಹಿತಿ ಪಡೆಯಲು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿರುತ್ತೇವೆ.

*<u>CROSS EXAMINATION</u>:-*

ಶ್ರೀ ಬುಂಡಾರಾವ್ ರವರು ಪಿ.ಐ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರನ್ನು ಪ್ರಶ್ನಿಸಿ ನಮ್ಮ ಮನೆಯಲ್ಲಿ ದಿನಾಂಕ.26.08.2016 ರಂದು ಆದ ದರೋಡೆಯನ್ನು ನಾನು ಮತ್ತು ನನ್ನ ಸಂಬಂಧಿ ಶ್ರೀ ರಾಜೇಶ್ ಜೊತೆ ಸೇರಿ ಒಳಸಂಚು ರೂಪಿಸಿ ಮಾಡಿದ್ದೇವೆ ಎಂದು ಪಿ.ಐ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ನೀಡಿರುವ ಹೇಳಿಕೆ ಸುಳ್ಳು ಇರುತ್ತದೆ. ನನ್ನ ಅಂಗಡಿಯಲ್ಲಿ ಒಡವೆಗಳನ್ನು ಅಡಮಾನ ಇಟ್ಟಿರುವುದಕ್ಕೆ ನಾನು ರಸೀದಿಗಳನ್ನು

*ಕೊಟ್ಟಿರುತ್ತೇನೆ. ನನ್ನ ಪುಸ್ತಕವನ್ನು ಸಹ ತಂದು ಹಾಜರುಪಡಿಸುತ್ತೇನೆ. ದೂರುದಾರರಾದ ಶ್ರೀ ಶ್ರೀನಿವಾಸ್.ಎಸ್, ಆಶಾ.ಎ ಹಾಗೂ ಶ್ರೀ ಮಣಿ.ವಿ ರವರು ನೀಡಿರುವ ದೂರು ಸರಿಯಿದ್ದರೆ ಇವರುಗಳು ಒಡವೆ ಅಡಮಾನ ಇಟ್ಟಿರುವ ರಸೀದಿಗಳು ಅಥವಾ ರಸೀದಿಗಳ ನಂಬರ್‌ಗಳನ್ನು ಹಾಜರುಪಡಿಸಲಿ.(ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ಮೇಲ್ಕಂಡ 3 ಜನ ವ್ಯಕ್ತಿಗಳು ಒಡವೆಗಳನ್ನು ಅಡಮಾನವಿಟ್ಟಿರುವ ಬಗ್ಗೆ ಅದರ ರಸೀದಿಗಳು ಅಥವಾ ರಸೀದಿಗಳ ನಂಬರ್‌ಗಳನ್ನು ಹಾಜರುಪಡಿಸಬೇಕು).*

*ಶ್ರೀ ಬುಂಡಾರಾಮ್ ರವರು ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರಿಗೆ ಪ್ರಶ್ನಿಸಿ ನನ್ನ ಪತ್ನಿ ಶ್ರೀಮತಿ ಲೀಲಾ ರವರನ್ನು ವಿಚಾರಣೆಗೆಂದು ಕರೆಯಿಸಿ ಹಲ್ಲೆ ನಡೆಸಿರುತ್ತಾರೆ ಎಂದು ಹೇಳಿದ್ದಕ್ಕೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ಇಲ್ಲ ಹಲ್ಲೆ ನಡೆಸಿರುವುದಿಲ್ಲ. ವಿಚಾರಣೆ ನಡೆಸಿರುತ್ತೇವೆ ಎಂದು ಉತ್ತರಿಸಿದರು.*

*ಶ್ರೀ ಬುಂಡಾರಾಮ್ ರವರು ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರಿಗೆ ಪ್ರಶ್ನಿಸಿ ಠಾಣೆಯಲ್ಲಿ ಇವರು ಹಾಗೂ ಇವರ ಜೊತೆಗಿದ್ದ ಇನ್ನು 3, 4 ಜನ ಪೊಲೀಸರು ಹಾಗೂ ಕ್ರೈಂನವರು ನನ್ನ ಮೇಲೆ ಹಲ್ಲೆ ನಡೆಸಿರುತ್ತಾರೆ ಎಂದು ಹೇಳಿದ್ದಕ್ಕೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ಇಲ್ಲ ಹಲ್ಲೆ ನಡೆಸಿರುವುದಿಲ್ಲ, ವಿಚಾರಣೆ ಮಾಡಿರುತ್ತೇವೆ ಎಂದು ಉತ್ತರಿಸಿದರು."*

ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರ ಹೇಳಿಕೆಯಲ್ಲಿ ಹೇಳಲಾದ ವ್ಯಕ್ತಿಗಳು ಶ್ರೀ ಬುಂಡ ರಾಮ್ ರವರ ಅಂಗಡಿಯಲ್ಲಿ ಚಿನ್ನದ ಒಡವೆಗಳನ್ನು ಗಿರವಿ ಇಟ್ಟಿದ್ದಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ಆಯೋಗದ ಪ್ರಭಾರ ಐಜಿಪಿ ರವರಿಗೆ ಆದೇಶಿಸಲಾಗಿದ್ದು, ಅದರಂತೆ ದಿನಾಂಕ.15.2.2021ರಂದು, ಪತ್ರದ ದಿನಾಂಕ.06.02.2021ರ ಅನ್ವಯ ವರದಿಯನ್ನು ಸಲ್ಲಿಸಿದ್ದು, ಅದರ ಬಗ್ಗೆ ಶ್ರೀ ಬುಂಡ ರಾಮ್ ರವರಿಂದ ಸ್ಪಷ್ಟೀಕರಣವನ್ನು ಆಯೋಗವು ಪಡೆದಿರುತ್ತದೆ.

ತದನಂತರ, ದಿನಾಂಕ.22.03.2021 ರಂದು ಶ್ರೀ ಬುಂಡ ರಾಮ್ ರವರು ಆಯೋಗದ ಮುಂದೆ ಹಾಜರಾಗಿದ್ದು, ಪೊಲೀಸ್ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪನವರು ಆಯೋಗದ ಮುಂದೆ ಹಾಜರಾಗಲು ಕಾಲಾವಕಾಶವನ್ನು ಕೋರಿ ಇ–ಮೇಲ್ ಮಾಡಿದ್ದು, ಅದರೊಂದಿಗೆ ಮೊ. ಸ.467/2016ರ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಬುಂಡ ರಾಮ್ ರವರ ಅಂಗಡಿಯಲ್ಲಿ ಚಿನ್ನಾಭರಣಗಳನ್ನು ಗಿರವಿ ಇಟ್ಟಿರುವ ರಸೀದಿಗಳ ಪ್ರತಿಗಳನ್ನು ಲಗತ್ತಿಸಿರುತ್ತಾರೆ.

ಆಯೋಗದ ಡಿವೈ.ಎಸ್.ಪಿ ರವರ ವರದಿಯ ಮೇರೆಗೆ ಶ್ರೀ ಬುಂಡ ರಾಮ್ ರವರನ್ನು ಆಯೋಗವು ಶ್ರೀ ಬುಂಡ ರಾಮ್ ರವರ ಅಂಗಡಿಯಲ್ಲಿ ಶ್ರೀ ಮಾಸಿಲ ಮಣಿ ರವರು ಅಡವಿಟ್ಟಿದ್ದ ಚಿನ್ನವನ್ನು ಏಕೆ ಹಿಂದಿರುಗಿಸಿಲ್ಲವೆಂದು ಕೇಳಲಾಗಿ, ಶ್ರೀ ಬುಂಡ ರಾಮ್ ರವರು ಶ್ರೀ ಮಾಸಿಲ ಮಣಿ ರವರು ಅಂಗಡಿಗೆ ಬಂದಿಲ್ಲವೆಂದು ಹಾಗೂ ಶ್ರೀ ಗೋಪಾಲಕೃಷ್ಣ ಮತ್ತು ಶ್ರೀ ನಾಗರಜ್ ರವರಿಗೆ ಅವರು ಅಡವಿಟ್ಟಿದ್ದ ಚಿನ್ನಕ್ಕಿಂತ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಚಿನ್ನವನ್ನು ನೀಡಿದ್ದು, ಶ್ರೀ ಮಸೀಲ್ ಮಣಿಗೆ ನಾನು ಏಕೆ ಅವರ ಚಿನ್ನದ ಒಡವೆಯನ್ನು ನೀಡುವುದಿಲ್ಲವೆಂದು ಉತ್ತರಿಸಿರುತ್ತಾರೆ.

ಪೊಲೀಸರು ಶ್ರೀ ಬುಂಡ ರಾಮ್ ಹಾಗೂ ಶ್ರೀಮತಿ ಲೀಲಾ ರವರ ಮೇಲೆ ಹಲ್ಲೆ ನಡೆಸಿದ್ದಾರೆಂದು ಆರೋಪಿಸಿ ಬೌರಿಂಗ್ ಹಾಗೂ ಲೇಡಿಕರ್ಜನ್ ಆಸ್ಪತ್ರೆಯಲ್ಲಿ ಅವರುಗಳು ವೈದ್ಯಕೀಯವಾಗಿ ಪರೀಕ್ಷಿಸಲ್ಪಟ್ಟು, ಆ ವೈದ್ಯಕೀಯ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಆದರೆ ಈ ಬಗ್ಗೆ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯವರು ಅವರ ಸರಹದ್ದಿಗೆ ಒಳಪಡುವ ಪೊಲೀಸ್ ಠಾಣೆಗೆ ಶ್ರೀ ಬುಂಡರಾಮ್ ಮತ್ತು ಶ್ರೀಮತಿ ಲೀಲಾ ರವರ ಎಂ.ಎಲ್.ಸಿಯನ್ನು ಕಳುಹಿಸಿರುತ್ತಾರೆಯೇ ಅಥವಾ ಇಲ್ಲವೇ ಎಂದು ಹಾಗೂ ಎಂ.ಎಲ್.ಸಿ ಯನ್ನು ಕಳುಹಿಸಿದ್ದರೇ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ತನಿಖೆ ಮಾಡಿ ವರದಿ ನೀಡುವಂತೆ ಆಯೋಗದ ಡಿವೈ.ಎಸ್.ಪಿ ರವರಿಗೆ ಆದೇಶ ಮಾಡಲಾಗಿದ್ದು, ದಿನಾಂಕ.19.04.2021 ರಂದು ಸದರಿಯವರು ವರದಿಯನ್ನು ಸಲ್ಲಿಸಿದ್ದು, ಕೆಳಕಂಡಂತಿದೆ:

> *"....ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಹಾಗೂ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಗೆ ನಮ್ಮ ಆಯೋಗದ ಸಿಬ್ಬಂದಿ ಶ್ರೀ ನಂಜುಂಡಪ್ಪ ರವರನ್ನು ಕಳುಹಿಸಿ ದಾಖಲಾತಿಗಳನ್ನು ಪಡೆದು ಪರಿಶೀಲಿಸಲಾಗಿ ದಿನಾಂಕ.31.08.2016 ರಂದು ರಾತ್ರಿ 09-15 ಗಂಟೆಗೆ ಬೌರಿಂಗ್ ಹಾಗೂ ಲೇಡಿಕರ್ಜನ್ ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ಚಿಕಿತ್ಸೆ ಪಡೆದಿದ್ದು, ವೈದ್ಯರ ಸಮಕ್ಷಮ ದಿನಾಂಕ.30.08.2016ರಂದು ಕೆ.ಆರ್ ಪುರಂ ಪೊಲೀಸರಿಂದ ಹಲ್ಲೆಗೊಳಗಾಗಿರುವುದಾಗಿ ಹೇಳಿಕೆ ನೀಡಿದ್ದು, ದಿನಾಂಕ.31.08.2016 ರಂದು ರಾತ್ರಿ 09-20 ಗಂಟೆಗೆ ಕೆ.ಆರ್ ಪುರಂ ಪೊಲೀಸ್ ಠಾಣೆಯ ಎಎಸ್ಐ ಶ್ರೀ ರೇಣುಕಯ್ಯ ಎಂಬುವರು ಸದರಿಯವರಿಗೆ ಸಂಬಂಧಿಸಿದ ಎಂಎಲ್‌ಸಿ ಮೆಮೋವನ್ನು ಸ್ವೀಕರಿಸಿರುವುದು ಕಂಡು ಬಂದಿರುತ್ತದೆ.*
>
> *ನಂತರ ಕೆ.ಆರ್ ಪುರಂ ಪೊಲೀಸ್ ಠಾಣೆಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪಿ.ಐ ರವರು ದಿನಾಂಕ.31.08.2016 ಮತ್ತು 01.09.2016ರ ಠಾಣಾ ದಿನಚರಿಯನ್ನು ಪರಿಶೀಲಿಸಿ, ದಾಖಲಾತಿಗಳೊಂದಿಗೆ ವರದಿ ಸಲ್ಲಿಸಿದ್ದು, ಸದರಿ ವರದಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಿನಾಂಕ.01.09.2021 ರಂದು ಹಗಲು ಕರ್ತವ್ಯದಲ್ಲಿದ್ದ ಹಾಗೂ ಠಾಣಾ ಉಸ್ತುವಾರಿಯಲ್ಲಿದ್ದ ಶ್ರೀ ನಾಗರಾಜು ಎಎಸ್ಐ ರವರು ಬೆಳಿಗ್ಗೆ 11-30*

*ಗಂಟೆಯಲ್ಲಿ ನಗರದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಪೊಲೀಸ್ ಹೊರ ಠಾಣೆಯಲ್ಲಿ ಶ್ರೀಮತಿ ಲೀಲಾ ಕೋಂ ಶ್ರೀ ಬುಂಡ ರಾಮ್ ರವರಿಗೆ ಸಂಬಂಧಿಸಿದ ಎಂಎಲ್‌ಸಿ ಮೆಮೋ ಪಡೆದು ಸದರಿಯವರ ಹೇಳಿಕೆ ದಾಖಲಿಸಿಕೊಂಡು ಬರುವಂತೆ ಪಿಸಿ-9312 ರವರನ್ನು ಕಳುಹಿಸಿಕೊಟ್ಟಿರುವುದಾಗಿ ಠಾಣಾ ದಿನಚರಿಯಲ್ಲಿ ನಮೂದಿಸಲಾಗಿರುತ್ತದೆ. ನಂತರ ಪಿಸಿ-9312 ರವರು ಅದೇ ದಿನ ಮಧ್ಯಾಹ್ನ ಸುಮಾರು 03-30 ಗಂಟೆಗೆ ಠಾಣೆಗೆ ವಾಪಾಸ್ ಆಗಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಮೇಲ್ಕಂಡ ಎಂ.ಎಲ್.ಸಿ ಮೆಮೋದಲ್ಲಿ ನಮೂದಾಗಿರುವ ಶ್ರೀಮತಿ ಲೀಲಾ ಮತ್ತು ಶ್ರೀ ಬುಂಡಾರಾಂ ರವರ ಬಗ್ಗೆ ವೈದ್ಯಾಧಿಕಾರಿಯವರನ್ನು ಭೇಟಿ ಮಾಡಿ ವಿಚಾರ ಮಾಡಲಾಗಿ ಸದರಿಯವರು ಹೊರರೋಗಿ ಸಂಖ್ಯೆ.389389 ಮತ್ತು 389391 ರಲ್ಲಿ ಚೀಟಿ ಪಡೆದು ಕ್ಯಾಜುಲಿಟಿಯಲ್ಲಿ ಚಿಕಿತ್ಸೆ ಪಡೆದು ಹೊರಟು ಹೋಗಿರುತ್ತಾರೆ. ನಂತರ ಈ ಬಗ್ಗೆ ಆಸ್ಪತ್ರೆಯ ಸಿಎಂಓ ರವರಲ್ಲಿ ವಿಚಾರ ಮಾಡಲಾಗಿ ಅವರು ಶ್ರೀಮತಿ ಲೀಲಾ ಮತ್ತು ಶ್ರೀ ಬುಂಡಾರಾಂ ರವರು ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲಾತಿಗಳಲ್ಲಿ ನಮೂದಾಗಿರುವುದಿಲ್ಲವೆಂದು ತಿಳಿಸಿದ್ದು, ಈ ಬಗ್ಗೆ ತಮ್ಮ ಠಾಣಾ ದಿನಚರಿಯಲ್ಲಿ ನಮೂದು ಮಾಡಿರುವುದಾಗಿ ವಿಚಾರಣಾ ಕಾಲದಲ್ಲಿ ಪಡೆದ ದಾಖಲಾತಿಗಳಿಂದ ಕಂಡು ಬಂದಿರುತ್ತದೆ....."*

ದೂರರ್ಜಿಗಳು, ವರದಿಗಳು, ಪ್ರಕರಣದ ದಾಖಲೆಗಳು, ಹೇಳಿಕೆಗಳು ಹಾಗೂ ಸಾಕ್ಷಾಧಾರಗಳನ್ನು ಪರಿಶೀಲಿಸಲಾಗಿ, ದಿನಾಂಕ.30.08.2016ರಂದು ಕೆ.ಆರ್ ಪುರಂ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ದೂರುದಾರರುಗಳಾದ ಶ್ರೀ ಬುಂಡ ರಾಮ್ ಹಾಗೂ ಶ್ರೀಮತಿ ಲೀಲಾ ರವರುಗಳನ್ನು ಪೊಲೀಸ್ ಠಾಣೆಗೆ ಕರೆಸಿ, ಶ್ರೀಮತಿ ಲೀಲಾ ರವರನ್ನು ವಿಚಾರಣೆ ಮಾಡಿದ್ದು, ತದನಂತರ ಅವರನ್ನು ಪೊಲೀಸ್ ಆಯುಕ್ತರವರು ನಿಮ್ಮನ್ನು ಭೇಟಿ ಮಾಡಬೇಕೆಂದು ಹೇಳಿ, ಬೇರೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ದೈಹಿಕ ಹಲ್ಲೆ ಮಾಡಿ, ಅಕ್ರಮ ಬಂಧನದಲ್ಲಿಟ್ಟಿದ್ದು, ಮಾರನೆ ದಿನ ಮುಂಜಾನೆ 06-00 ಗಂಟೆಗೆ ಬಿಡುಗಡೆಗೊಳಿಸಿರುತ್ತಾರೆಂದು ಶ್ರೀಮತಿ ಲೀಲಾ ಹಾಗೂ ಶ್ರೀ ಬುಂಡ ರಾಮ್ ರವರ ಹೇಳಿಕೆಗಳಿಂದ ಹಾಗೂ ಶ್ರೀ ಲೀಲಾ ರವರ ಮೇಲೆ ಹಲ್ಲೆ ನಡೆಸಿರುವ ಬಗ್ಗೆ ದೂರುದಾರರು ಕೊಟ್ಟಿರುವ ಫೋಟೋಗಳಿಂದ ಹಾಗೂ ಎಂಎಲ್‌ಸಿಯಿಂದ ಕಂಡು ಬರುತ್ತದೆ.

ಪುನ: ದಿನಾಂಕ.30.08.2016 ರಂದು ರಾತ್ರಿ 09-00 ಗಂಟೆಗೆ ಕೆ.ಆರ್ ಪುರಂ ಪೊಲೀಸ್ ಠಾಣೆಯಿಂದ ದೂರುದಾರರಾದ ಶ್ರೀ ಬುಂಡ ರಾಮ್ ರವರಿಗೆ ತಕ್ಷಣ ನಿಮ್ಮ ಮಕ್ಕಳೊಂದಿಗೆ ಠಾಣೆಗೆ ಬರಬೇಕೆಂದು ದೂರವಾಣಿ ಕರೆ ಬಂದಿದ್ದು, ಅದರಂತೆ ಠಾಣೆಗೆ ಹೋದಾಗ ಕೆ.ಆರ್ ಪುರಂ ಪೊಲೀಸರು ಶ್ರೀ ಬುಂಡ ರಾಮ್ ರವರಿಗೆ ವಿವಸ್ತ್ರಗೊಳಿಸಿ, ದೈಹಿಕವಾಗಿ ಹಲ್ಲೆ ನಡೆಸಿ, ಅವರನ್ನು ಅಕ್ರಮ ಬಂಧನದಲ್ಲಿಟ್ಟು, ಮಾರನೇ ದಿನ ಬೆಳಿಗ್ಗೆ 08-00 ಗಂಟೆಗೆ ಠಾಣೆಯಿಂದ ಬಿಡುಗಡೆಗೊಳಿಸಿರುತ್ತಾರೆಂದು ಶ್ರೀ ಬುಂಡ ರಾಮ್ ರವರ ಹೇಳಿಕೆಯಲ್ಲಿ ಹಾಗೂ ಪೊಲೀಸರು ಹಲ್ಲೆ

ಮಾಡಿರುವ ಬಗ್ಗೆ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಹೊರರೋಗಿ ವಿಭಾಗದ ರಸೀದಿಯಿಂದ ಕಂಡು ಬಂದಿರುತ್ತದೆ.

ಒಟ್ಟಾರೆಯಾಗಿ, ಪೊಲೀಸ್ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪನವರು ಶ್ರೀ ಬುಂಡ ರಾಮ್ ಹಾಗೂ ಶ್ರೀಮತಿ ಲೀಲಾ ರವರ ಎಂಎಲ್‌ಸಿ ಬಗ್ಗೆ ಹಾಗೂ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ಶ್ರೀಮತಿ ಲೀಲಾ ರವರ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿರುವ ಬಗ್ಗೆ ಯಾವುದೇ ಕ್ರಮ ಜರುಗಿಸದೇ ಅವರ ಕರ್ತವ್ಯ ನಿರ್ಲಕ್ಷತನವೆಸಗಿರುವುದು ಕಂಡು ಬರುತ್ತದೆ. ಮುಂದುವರೆದು, ಅಂದಿನ ಕೆ. ಆರ್. ಪುರಂ ಪೊಲೀಸ್ ಉಪ-ನಿರೀಕ್ಷಕರಾದ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ಶ್ರೀಮತಿ ಲೀಲಾ ರವರನ್ನು ಪೊಲೀಸ್ ಆಯುಕ್ತರು ನಿಮ್ಮನ್ನು ಭೇಟಿ ಮಾಡಬೇಕೆಂದು ಹೇಳಿ ಬೇರೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ದೂರುದಾರರಾದ ಲೀಲಾ ರವರ ಮೇಲೆ ದೈಹಿಕ ಹಲ್ಲೆ ನಡೆಸಿ, ಇಡೀ ರಾತ್ರಿ ಒಂದು ಮಹಿಳೆಯನ್ನು ಅಕ್ರಮ ಬಂಧನದಲ್ಲಿಟ್ಟಿ ಶ್ರೀ ಮೆಲ್ವಿನ್ ಫ್ರಾನ್ಸಿಸ್ ರವರು ಅವರ ಕರ್ತವ್ಯ ಲೋಪವೆಸಗಿರುವುದು ಹಾಗೂ ಕರ್ತವ್ಯವನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಿರುತ್ತದೆ ಹಾಗೂ ಪೊಲೀಸ್ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪನವರು ಈ ಘಟನೆಯ ಬಗ್ಗೆ ಯಾವುದೇ ರೀತಿ ಕ್ರಮ ಜರುಗಿಸದೇ ಕರ್ತವ್ಯ ನಿರ್ಲಕ್ಷತನ ತೋರಿರುವುದು ವಿಚಾರಣಾ ಕಾಲದಲ್ಲಿ ಕಂಡು ಬರುತ್ತದೆ. ಮುಂದುವರೆದು, ಕೆ.ಆರ್. ಪುರಂ ಪೋಲೀಸರು ಶ್ರೀ ಬುಂಡ ರಾಮ್ ರವರನ್ನು ಪೊಲೀಸ್ ಠಾಣೆಗೆ ಕರೆಸಿಕೊಂಡು ಅವರನ್ನು ವಿವಸ್ತ್ರಗೊಳಿಸಿ, ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಲ್ಲೆ ನಡೆಸಿ, ಅವರನ್ನು ಅಕ್ರಮ ಬಂಧನದಲ್ಲಿಟ್ಟಕೊಂಡಿರುವ ಬಗ್ಗೆ ಪೊಲೀಸ್ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪನವರು ಯಾವುದೇ ಕ್ರಮ ಜರುಗಿಸದೇ ಕರ್ತವ್ಯ ನಿರ್ಲಕ್ಷತನವೆಸಗಿರುವುದು ಹಾಗೂ ಠಾಣೆಯಲ್ಲಿ ನಡೆದ ಘಟನೆ ಸಂಭವಿಸದಂತೆ ತಡೆಯುವಲ್ಲಿ ವಿಫಲರಾಗಿರುವುದು ವಿಚಾರಣಾ ಕಾಲದಲ್ಲಿ ಕಂಡು ಬರುತ್ತದೆ.

ಮೇಲ್ಕಂಡ ಕಾರಣಗಳಿಂದ, ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ:

> ದೂರರ್ಜಿದಾರರಾದ ಶ್ರೀಮತಿ ಲೀಲಾ ಹಾಗೂ ಶ್ರೀ ಬುಂಡ ರಾಮ್ ರವರಿಗೆ ರೂ. 50,000/- (ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ ಸರ್ಕಾರದಿಂದ ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಪ್ರಕರಣದ ಘಟನೆಯ ಬಗ್ಗೆ ಕೆ.ಆರ್. ಪುರಂ ಪೊಲೀಸ್ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪ ಹಾಗೂ ಅಂದಿನ ಕೆ.ಆರ್. ಪುರಂ ಪೊಲೀಸ್ ಠಾಣೆಯ ಪೊಲೀಸ್ ಉಪ-

ನಿರೀಕ್ಷಕರಾದ ಶ್ರೀ ಮೆಲ್ವಿನ್ ಫ್ರಾನ್ಸಿಸ್ (ಹಾಲಿ ಪೊಲೀಸ್ ನಿರೀಕ್ಷಕರು, ಡಿ.ಸಿ.ಐ.ಬಿ., ಚಿಕ್ಕಬಳ್ಳಾಪುರ ಜಿಲ್ಲೆ) ರವರುಗಳ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ಮಾಡಿ, ಅಗತ್ಯ ಕ್ರಮ ವಿಧಿಸುವಂತೆ ಶಿಫಾರಸ್ಸು ಮಾಡಲಾಗಿದೆ. ನಂತರ ವಿಚಾರಣೆಯ ತೀರ್ಪಿಗೊಳಪಟ್ಟ ಕೆ.ಆರ್. ಪುರಂ ಪೊಲೀಸ್ ನಿರೀಕ್ಷಕರಾದ ಶ್ರೀ ಸಂಜೀವರಾಯಪ್ಪ ಹಾಗೂ ಅಂದಿನ ಕೆ.ಆರ್. ಪುರಂ ಪೊಲೀಸ್ ಠಾಣೆಯ ಪೊಲೀಸ್ ಉಪ-ನಿರೀಕ್ಷಕರಾದ ಶ್ರೀ ಮೆಲ್ವಿನ್ ಫ್ರಾನ್ಸಿಸ್ (ಹಾಲಿ ಪೊಲೀಸ್ ನಿರೀಕ್ಷಕರು, ಡಿ.ಸಿ.ಐ.ಬಿ, ಚಿಕ್ಕಬಳ್ಳಾಪುರ ಜಿಲ್ಲೆ) ರವರ ವೇತನಗಳಿಂದ ಪರಿಹಾರ ನೀಡಿದ ಹಣವನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು.

ಆದೇಶದ ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು ಹಾಗೂ *ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು* ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 31-08-2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.